

ಎನ್ನುತ್ತದೆ. ಈ ಆಂತರಿಕ ಸಮಿತಿಯ ಮುಖ್ಯ ಸದಸ್ಯೆ ಹಿರಿಯ ಮಹಿಳಾ ಉದ್ಯೋಗಿಯಾಗಿರಬೇಕು. ಸಮಿತಿಯಲ್ಲಿ ಕನಿಷ್ಠ ಶೇ 50ರಷ್ಟು ಸದಸ್ಯರು ಮಹಿಳೆಯರಾಗಿಬೇಕು, ಒಬ್ಬರು ಬಾಹ್ಯ ಸದಸ್ಯರಿರಬೇಕು. ಹಾಗೆಯೇ ಉದ್ಯೋಗದ ಸ್ಥಳಗಳಲ್ಲಿ ಎಲ್ಲಾ ಉದ್ಯೋಗಿಗಳಿಗೆ (ಪುರುಷರೂ ಸೇರಿದಂತೆ) ಈ ಕಾನೂನಿನ ಮಾಹಿತಿ ಕೊಡಬೇಕು. ಲಿಂಗ ಸಮಾನತೆ, ಕಿರುಕುಳ, ಪರಿಹಾರಗಳ ಬಗ್ಗೆ, ಹಾಗೂ ಈ ಕಾನೂನು ಏನು ಹೇಳುತ್ತದೆ ಮತ್ತು ಯಾವ ಉದ್ದೇಶಕ್ಕಾಗಿ ಇದೆ ಎನ್ನುವುದರ ಬಗ್ಗೆ ಕಡ್ಡಾಯವಾಗಿ ತರಬೇತಿ ನೀಡಬೇಕು ಎಂದೂ ಈ ಕಾನೂನು ಹೇಳುತ್ತದೆ. ಲಿಂಗ ತಾರತಮ್ಯ ಹಾಗೂ ಅದರಿಂದ ಉದ್ಭವಿಸುವ ಹಿಂಸೆ, ಕಿರುಕುಳಗಳ ಬಗ್ಗೆ ಸಾಮಾನ್ಯ ಜನರಲ್ಲಿ ಅರಿವು ಮೂಡಿಸುವುದು ಈ ನಿಟ್ಟಿನಲ್ಲಿ ಬಹಳ ಮುಖ್ಯವಾಗಿ ಕಾಣುತ್ತದೆ.



### ಅಪಸ್ವರಗಳು ಹೀಗೂ ಏಳುತ್ತವೆ

ಮಹಿಳೆಯರ ರಕ್ಷಣೆ ಹಾಗೂ ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸುವ ಯಾವುದೇ ವಿಶೇಷ ಕಾನೂನಿನ ಬಗ್ಗೆ ಸಂವಾದ ನಡೆದಾಗ ಒಂದಷ್ಟು ಜನ ಇದರ ಬಗ್ಗೆ ತಕರಾರು ಎತ್ತುತ್ತಾರೆ. 'ಇಂಥ ಕಾನೂನೇ ತಾರತಮ್ಯವಲ್ಲವೇ' ಎಂಬುದು ಅವರ ಪ್ರಶ್ನೆಯಾಗಿರುತ್ತದೆ. ಮಹಿಳೆಯರಿಗೆ ಮಾತ್ರ ಪ್ರತ್ಯೇಕ ಕಾನೂನು ಮಾಡಿದಲ್ಲಿ ಹಿಂಸೆ, ಕಿರುಕುಳಗಳಿಗೆ ಒಳಗಾದ ಪುರುಷರು ಎಲ್ಲಿ ಹೋಗಬೇಕು, ಪರಿಹಾರಗಳನ್ನು ಹೇಗೆ ಪಡೆದುಕೊಳ್ಳಬೇಕು ಎನ್ನುವ ಪ್ರಶ್ನೆಗಳು ಏಳುತ್ತವೆ.

ಭಾರತೀಯ ಸಂವಿಧಾನದ ಆರ್ಟಿಕಲ್ 14 ಸಮಾನತೆಯನ್ನು ಮೂಲಭೂತ ಹಕ್ಕೆಂದು ಘೋಷಿಸುತ್ತ, ಕಾನೂನಿನ ಎದುರು ಎಲ್ಲರೂ ಸಮಾನರು ಎಂದು ಹೇಳುತ್ತದೆ. ಆರ್ಟಿಕಲ್ 15ರಲ್ಲಿ, ಧರ್ಮ, ಜಾತಿ, ಹುಟ್ಟಿದ ಸ್ಥಳ, ಲಿಂಗ ಇದ್ಯಾವುದೇ ಆಧಾರದಲ್ಲಿ ತಾರತಮ್ಯ ಮಾಡುವಂತಿಲ್ಲ ಎನ್ನುವುದನ್ನೂ ಹೇಳುತ್ತದೆ. ಹಾಗೆಯೇ, ಆರ್ಟಿಕಲ್ 15ರ ಅನುಚ್ಛೇದದಲ್ಲಿ, ಮಹಿಳೆಯರು ಮತ್ತು ಮಕ್ಕಳ ಏಳ್ಗೆಗೆ ಸಂಬಂಧಪಟ್ಟಂತೆ ಸರ್ಕಾರಗಳು ವಿಶೇಷ ಕಾನೂನನ್ನು ರೂಪಿಸಬಹುದು ಎಂದು ಕೂಡ ಹೇಳುತ್ತದೆ. ಇದೇ ಆಧಾರದ ಮೇರೆಗೆ ಈ ವಿಶೇಷ